ಹೋರಾಟಗಾರರಿಗೆ ಕೊಡುತ್ತೇವೆ. ಶೇಕಡ ೨೦ರಷ್ಟು ಸೈಟುಗಳನ್ನು ಕಲಾವಿದರು, ಕರಕುಶಲ ಕರ್ಮಿಗಳು, ಪ್ರೆಸ್‌ನವರು ಮತ್ತಿತರರಿಗೆ ಕೊಡುತ್ತೇವೆ ಉಳಿದ ಶೇಕಡ ೨೫ರಷ್ಟು ಸೈಟುಗಳನ್ನು ಮಹಿಳಾ ಮಂಡಲಗಳು, ಟ್ರಸ್ಟ್‌ಗಳು, ಸಿವಿಕ್ ಅಮೆನಿಟೀಸ್‌ಗಳಿಗೆ ಕೊಡುತ್ತೇವೆ. ತಪ್ಪು ಪ್ರಶ್ನೆ ಇರತಕ್ಕದ್ದು ಮಾನ್ಯ ನಿವೇಶನಗಳನ್ನು ಹರಾಜು ಮಾಡಲಾಗಿದೆ ಎಂದು. ಸೈಟುಗಳನ್ನು ಹರಾಜು ಮಾಡುವಾಗ ಮೀಸಲು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ನಾವು ಸೈಟುಗಳನ್ನು ಮುಖ್ಯವಾಗಿ ಮತಕ್ಕೆ ಹರಾಜು ಮಾಡುತ್ತೇವೆಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಕೊಡುತ್ತೇವೆ, ಅಂಬೇಡ್ಕರ್ ಸ್ಕೀಮ್‌ನಲ್ಲಿ ೨ ಸಾವಿರ ಸೈಟುಗಳನ್ನು ಕೊಡುತ್ತೇವೆ. ನಾವು ಆ ಸೈಟಿನ ಬೆಲೆ ಏನಿದೆ ಅದರ ಶೇಕಡ ೨೫ರಷ್ಟು ಬೆಲೆಗೆ ಅವರಿಗೆ ಕೊಡುತ್ತೇವೆ. ಅದೇ ಪ್ರಕಾರ ಆರ್ಥಿಕವಾಗಿ ಹಿಂದುಳಿದವರಿಗೆ ಸೈಟುಗಳನ್ನು ಕೊಡುವಾಗ ಆ ಸೈಟಿನ ಬೆಲೆ ಏನಿದೆ ಅದರ ಶೇಕಡ ೫೦ರಷ್ಟು ಬೆಲೆಗೆ ಕೊಡುತ್ತೇವೆ ಜೊತೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಡ್ಮಿನಿಸ್ಟ್ರೇಟಿವ್ ಚಾರ್ಜ್, ಸಿಬ್ಬಂದಿ ವೆಚ್ಚ, ಪ್ರಿಂಟಿಂಗ್, ಮತ್ತಿತರೆ ಖರ್ಚುಗಳಿಗಾಗಿ ಸೈಟುಗಳನ್ನು ಹರಾಜು ಮಾಡುತ್ತೇವೆ. ಸ್ವಾತಂತ್ರ್ಯ ಹೋರಾಟಗಾರರಿಗೆ ಮತ್ತು ಬೇರೆಯವರಿಗೆ ಸೈಟುಗಳನ್ನು ಏನು ಕೊಟ್ಟಿದ್ದೇವೆ ನಾವು ಕೊಡುವಾಗ ಏನಾದರೂ ರೂಲ್ಸ್ ಬಿಟ್ಟು ಕೊಟ್ಟಿದ್ದರೆ ಅದರಲ್ಲಿ ಏನಾದರೂ ಲೋಪದೋಷಗಳಾಗಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಅದನ್ನು ನಾನು ಸರಿಪಡಿಸುತ್ತೇನೆ.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ವಕ್ಫ್ ಸಮಿತಿಗಳಿಗೆ ಪ್ರತ್ಯೇಕ ಕಛೇರಿ ಕಟ್ಟಡ

ಶ್ರೀ ಶ್ರೀ ಮಹಮ್ಮದ್ ಲೈಕುದ್ದೀನ್ (ಬೀದರ್).—ಮಾನ್ಯ ವಕ್ಫ್ ಬಂದರುಗಳು ಮತ್ತು ಅಂತರ್ಜಲ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ವಕ್ಫ್ ಸಮಿತಿಗಳಿಗೆ ಪ್ರತ್ಯೇಕವಾಗಿ ಕಛೇರಿ ಕಟ್ಟಡ ಕಟ್ಟುವುದು ಸರ್ಕಾರವು ತೀರ್ಮಾನಿಸಿದೆಯೇ;

ಆ) ಹಾಗಿದ್ದಲ್ಲಿ ಈ ಕಛೇರಿ ಕಟ್ಟಡಗಳನ್ನು ಕಟ್ಟಲು ಎಷ್ಟು ಸಮಯ ಬೇಕಾಗಿರುತ್ತದೆ ಹಾಗೂ ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ?

ಶ್ರೀ ರೋಷನ್ ಬೇಗ್ (ವಕ್ಫ್ ಬಂದರುಗಳು ಮತ್ತು ಅಂತರ್ಜಲ ಸಾರಿಗೆ ಮಂತ್ರಿಗಳು).—

ಅ) ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) (ಅ)ಕ್ಕೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

SRI MOHAMMED LAIQUDDIN.–Sir, throughout Karnataka there are not more than 20 District Wakf Committees and not a single committee has been given an independent office. At the time of inauguration of the Wakf Board, the Hon. Minister for Wakf had promised that he will provide the offices to all the District Wakf Committees. I understand that now there is no such proposal. If the District Wakf Committees are not given independent offices and are not provided accomodation to the staff members, the administration of the Wakf at the district level will be hampered. The administration of wakf at present is really in dolldrums. There is a dire necessity to establish wakf offices at the district level accomodating the Inspector-cum-Auditors, Staff members, typists etc. There are valuable wakf property records and in the absence of independent offices, they will be in danger. So my earnest request is that a positive step should be taken by the Government to provide independent offices to all the District Wakf Committees at the District level. It will not cost more to the Government. A small office accomodating the Inspector-cum-Auditor, the typist and

watchman. I again request you earnestly to provide such offices to all distiets.

Sri Roshan Baig.—Sir, it is a very good suggestion. I will examine it.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಪ್ರೋ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ರಾಜ್ಯದ ಕಲಾವಿದರಿಗೆ ಸರಕಾರಿ ಸವಲತ್ತು

೨೫೫. ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ವಾರ್ತಾ ಪ್ರವಾಸೋದ್ಯಮ ಮತ್ತು ಕನ್ನಡ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಕಲಾವಿದರುಗಳು ಸರ್ಕಾರಿ ಸವಲತ್ತುಗಳನ್ನು ಪಡೆಯಲು ಅವರನ್ನು ಯಾವ ಆಧಾರದ ಮೇಲೆ ಇಲಾಖೆಯವರು ಶಿಫಾರಸ್ಸು ಮಾಡುತ್ತಾರೆ ?

ಆ) ೧೯೮೬-೮೮ರ ತನಕ ದ. ಕ. ಜಿಲ್ಲೆಯಲ್ಲಿ ಎಷ್ಟು ಜನ ಕಲಾವಿದರು ಈ ಸವಲತ್ತುಗಳನ್ನು ಪಡೆದಿದ್ದಾರೆ ?

(ವಾರ್ತಾ ಪ್ರವಾಸೋದ್ಯಮ ಮತ್ತು ಕನ್ನಡ ಸಂಸ್ಕೃತಿ).—

ಅ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ರೂ. ೫೦೦ ಗೌರವಧನ ಇಬ್ಬರಿಗೆ
ರೂ. ೨೫೦ ಗೌರವಧನ ೬ ಜನರು
ರೂ. ೧೫೦ ಮಾಸಾಶನ ೨೩ ಜನರು

ಅನುಬಂಧ

ಕಲೆ, ಸಂಸ್ಕೃತಿ, ಸಾಹಿತ್ಯ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಪ್ರತಿಭಾವಂತ ವ್ಯಕ್ತಿಗಳಿಗೆ ಗೌರವಧನವನ್ನು ನೀಡಲಾಗುತ್ತಿದೆ. ಇದಕ್ಕೆ ಈ ಕೆಳಕಂಡ ಅರ್ಹತೆಗಳನ್ನು ಹೊಂದಿದವರನ್ನು ಇಲಾಖೆಯವರು ಶಿಫಾರಸ್ಸು ಮಾಡುತ್ತಾರೆ.

ಗೌರವಧನ

೧) ವಯಸ್ಸು ಕನಿಷ್ಠ ೫೫ ವರ್ಷಗಳಾಗಿರಬೇಕು.

೨) ಸಂಬಂಧಿಸಿದ ಕ್ಷೇತ್ರದಲ್ಲಿ ೨೫ ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿರಬೇಕು.

೩) ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ನೀಡಿರುವ ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದಿರುವುದನ್ನು ಗಮನಿಸಲಾಗುತ್ತದೆ. ಹಾಗೂ ರಾಜ್ಯ ಕೇಂದ್ರ ಅಕಾಡೆಮಿಗಳು ನೀಡಿರುವ ಪ್ರಶಸ್ತಿಗಳನ್ನೂ ಪರಿಗಣಿಸಲಾಗುವುದು.

೪) ಆರ್ಥಿಕ ಪರಿಸ್ಥಿತಿ ಹಾಗೂ ಅರ್ಹತೆಗೆ ಹೆಚ್ಚು ಪ್ರಾಧಾನ್ಯತೆ ನೀಡಲಾಗುತ್ತದೆ. ಅಲ್ಲದೆ ಆರ್ಥಿಕವಾಗಿ ದುರ್ಬಲರಾಗಿರುವವರನ್ನೂ ಪರಿಗಣಿಸಲಾಗುವುದು.

೫) ವಾರ್ಷಿಕ ವರಮಾನ ರೂ. ೮,೦೦೦-೦೦ ರಿಂದ ೧೦,೦೦೦-೦೦ ಗಳವರೆಗೆ ಇರುವವರನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ.